ರಾಜ್ಯದಲ್ಲಿ ತಯಾರಾದ ಸರಕುಗಳ ರಫ್ತು ಸಾಗಾಣಿಕೆಯ ತೊಂದರೆ

4184 (4599) : ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳಿಂದ ತಯಾರಿಸಿದ ಸರಕುಗಳು ಯಾವ ಯಾವ ದೇಶಗಳಿಗೆ ರಫ್ತು ಆಗುತ್ತವೆ.

ಆ) ಎಷ್ಟು ಮೌಲ್ಯದ ಸರಕುಗಳು ಬೇರೆ ದೇಶಗಳಿಗೆ ರಫ್ತು ಆಗುತ್ತಿವೆ.

ಇ) ರಾಜ್ಯದ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳಿಂದ ತಯಾರಿಸಿದ ಸರಕುಗಳನ್ನು ಬೇರೆ ದೇಶಗಳಿಗೆ ರಫ್ತು ಮಾಡಲು ತೊಂದರೆಯಾಗುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೆ:

ಈ) ಹಾಗಿದ್ದಲ್ಲಿ ರಫ್ತು ಮಾಡಲು ಸರಳೀಕರಣವಾಗಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು)

ಅ) ರಾಜ್ಯದಲ್ಲಿ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳಿಂದ ತಯಾರಿಸಿದ ಸರಕುಗಳು ಅಮೇರಿಕ, ಆಫ್ರಿಕ, ಐರೋಪ್ಯ, ನೈರುತ್ಯ ಏಷ್ಯದ ದೇಶಗಳಿಗೆ ಹಾಗೂ ಇತರ ನೆರೆ ಹೊರೆಯ ದೇಶಗಳಿಗೆ ರಫ್ತಾಗುತ್ತಿದೆ.

ಆ) ರಾಜ್ಯದ 2002–2003ರ ಒಟ್ಟು ಅಂದಾಜು ರಫ್ತು ರೂ. 26,279.43 ಕೋಟಿಗಳಾಗಿದ್ದು, ಇದರಲ್ಲಿ ಶೇ. 60 ರಷ್ಟು ಅಂದರೆ ರೂ. 15,750 ಕೋಟಿಗಳು ಭಾರಿ ಮತ್ತು ಮಧ್ಯಮ ಕೈಗಾರಿಕೆಗಳಿಂದ ರಫ್ತಾಗಿರುತ್ತದೆ.

ಇ) ಹೌದು

ಈ) ರಾಜ್ಯದ ರಫ್ತು ಪ್ರಮಾಣವನ್ನು ಗಣನೀಯವಾಗಿ ಹೆಚ್ಚಿಸಲು ಹಾಗೂ ರಫ್ತು ಚಟುವಟಿಕೆಗಳನ್ನು ಪ್ರೋತ್ಸಾಹಿಸಲು ಕರ್ನಾಟಕ ರಫ್ತು ಉತ್ತೇಜನ ನೀತಿ 2002–2007ಅನ್ನು ಪ್ರಕಟಿಸಲಾಗಿದೆ. ಈ ನೀತಿಯ ಮುಖ್ಯಾಂಶಗಳೇನೆಂದರೆ

1. ರಾಷ್ಟ್ರದ ರಫ್ತು ವಹಿವಾಟಿನಲ್ಲಿ ರಾಜ್ಯದ ರಫ್ತು ಪ್ರಮಾಣವನ್ನು ಶೇ 7 ರಿಂದ ಶೇ 15ಕ್ಕೆ ಹೆಚ್ಚಿಸುವುದು.
2. ರಫ್ತು ಚಟುವಟಿಕೆಗಳಿಗೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು.
3. ಮಧ್ಯಮಾವದಿ ರಫ್ತು ನೀತಿಯನ್ನು ಪ್ರತಿಯೊಂದು ರಫ್ತು ಕ್ಷೇತ್ರಗಳಿಗೆ ಅಳವಡಿಸುವುದು. ವಿಶ್ವೇಶ್ವರಯ್ಯ ಕೈಗಾರಿಕಾ ವ್ಯಾಪಾರ ಕೇಂದ್ರವು ರಾಜ್ಯ ಸರ್ಕಾರದ ರಫ್ತು ಉತ್ತೇಜನಾ ಕೇಂದ್ರವಾಗಿರುತ್ತದೆ. ರಫ್ತುಗಾರರಿಗೆ ಸಂಬಂಧಿಸಿದ ತೊಂದರೆಗಳನ್ನು ವಿವಿಧ ಕೇಂದ್ರ ಮತ್ತು ರಾಜ್ಯಗಳ ರಫ್ತು ಸಂಬಂಧಿತ ಸಮಿತಿಯಗಳ ಮುಂದಿಟ್ಟು ಆಗಿಂದ್ಯಾಗೆ ಪರಿಹರಿಸಲಾಗುತ್ತಿದೆ.

The number of students on pre-matric Hostels Belgaum District

4185 (4600) : Sri Koujalagi Mahanthesh Shivananda (Byala Hongala): Minister for Social Welfare be pleased to State.

a) How many students are there in boys pre-matric hostels of Backward Classes and Minorites, SC/ST hostels of the State;